ಜೊತೆ ಬಂದಿದ್ದರು. ಅವರಿಬ್ಬರೂ ಸಹ ನನಗೆ ಸಹಕಾರ ಕೊಟ್ಟರು ಅಲ್ಲೆಲ್ಲಾ ಬರಲಿಕ್ಕೆ ಅಲ್ಲಿ ಜಾಗ ತೆಗೆದುಕೊಳ್ಳುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅಕ್ವಿಜೇಶನ್ ಪ್ರೊಸೀಡಿಂಗ್ಸ್‌ನ್ನು ಪ್ರಾರಂಭ ಮಾಡಿದ್ದೇವೆ. ಈ ಮಧ್ಯೆ ಕೇಂದ್ರ ಸರ್ಕಾರದವರು ಪ್ರಾಡಕ್ಟ್ ಸ್ಪೆಸಿಫಿಕ್ ಎಕನಾಮಿಕ್ ಜೋನ್ ಮಾಡಲಿಕ್ಕೆ ಮಂಗಳೂರಿಗೆ ಐ ಟಿ ಪಾರ್ಕ್ ಮಾಡಲಿಕ್ಕೆ ನಮಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದನ್ನು ಸಹ ಸಂತೋಷದಿಂದ ಹೇಳುತ್ತೇನೆ.

**ಶ್ರೀ.ಬಿ.ನಾಗರಾಜ ಶೆಟ್ಟಿ** : ರಾಜ್ಯ ಸರ್ಕಾರದ ಯೋಜನೆಯೇ ಬೇರೆ, ಕೇಂದ್ರ ಸರ್ಕಾರದ ಯೋಜನೆಯೇ ಬೇರೆ, ರಾಜ್ಯ ಸರ್ಕಾರದ 290 ಎಕರೆ ಭೂಮಿಯನ್ನು ನಾವು ಈಗಾಗಲೇ ವಶೀಕರಣ ಮಾಡಿ ಆಗಿದೆ, ಅಕ್ವೈರ್ ಮಾಡಿ ಆಗಿದೆ, ಅದರಲ್ಲಿ ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡಿದರೆ ಒಳ್ಳೆಯಯದೆಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

**ಶ್ರೀ.ಪಿ.ಜಿ.ಆರ್.ಸಿಂಧ್ಯ** : ಮಾನ್ಯ ಸದಸ್ಯರ ಅವಸರವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ, ಈಗ ಕಾನೂನುಬದ್ಧವಾಗಿ ಜಮೀನು ತೆಗೆದುಕೊಳ್ಳಬೇಕೆಂದರೆ ಸೆಕ್ಷನ್ 28 (1)ಅನ್ನು ಮೊದಲು ಹೊರಡಿಸಬೇಕು, ಇಲ್ಲವೆಂದರೆ ಅಲ್ಲಿಯ ರೈತರು ಬಂದು ಗಲಾಟೆ ಮಾಡುತ್ತಾರೆ ಸೆಕ್ಷನ್ 28 (1)ಅನ್ನು ಹೊರಡಿಸಿದ್ದೇವೆ. ಸೆಕ್ಷನ್ 28(4)ಅನ್ನು ಇನ್ನು 15-20 ದಿವಸಗಳೊಳಗೆ ಹೊರಡಿಸುತ್ತೇವೆ, ಅದಾದ ಮೇಲೆ ಪರಿಹಾರವನ್ನೆಲ್ಲಾ ಕೊಟ್ಟು ಆ ಜಮೀನನ್ನು ತೆಗೆದುಕೊಂಡು, ಸ್ಪೆಷಲ್ ಎಕನಾಮಿಕ್ ಜೋನ್‌ಗೂ ಕೂಡ ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ, ಈ ವರ್ಷ ಐಟಿ ಪಾರ್ಕ್ ಪ್ರಾರಂಭ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

**ಅಧ್ಯಕ್ಷರು** : ಕೃಷ್ಣಪಾಲೇಮಾರ್‌ರವರೆ, ನಿಮ್ಮ 2122 ಪ್ರಶ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಯಾಗಿದೆ, ಆ ಸಚಿವರು ಉತ್ತರ ಕೊಡುವ ದಿವಸ ಉತ್ತರವನ್ನು ಕೊಡಿಸುತ್ತೇನೆ; ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ.ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು)** : ಮಾನ್ಯ ಅಧ್ಯಕ್ಷರೆ, ದಿನಾಂಕ: 15.3.2005ರ 10ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 131 ಪ್ರಶ್ನೆಗಳ ಪೈಕಿ 105 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ-1)

**ಅಧ್ಯಕ್ಷರು** : ಮಂಡಿಸಲಾಯಿತು.

ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

**3) ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ.ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ)** : ಮಾನ್ಯ ಅಧ್ಯಕ್ಷರೆ, 2004-05ನೇ ಸಾಲಿನ ರಾಜ್ಯ ಹಣಕಾಸು ಪರಿಸ್ಥಿತಿಯ ಮಧ್ಯಮಾವಧಿ ಪರಿಶೀಲನಾ ವರದಿಯನ್ನು ತಮ್ಮ ಅನುಮತಿಯೊಡನೆ ಸದನದ ಮುಂದಿಡುತ್ತಿದ್ದೇನೆ.

(ಅನುಬಂಧ-2)

**ಅಧ್ಯಕ್ಷರು** : ಮಂಡಿಸಲಾಯಿತು.

**4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :(ಅ) ಹಕ್ಕುಚ್ಯುತಿ ಸೂಚನೆಯನ್ನು ವಾಪಸ್ಸು ತೆಗೆದು ಕೊಳ್ಳುವ ಬಗ್ಗೆ.**

**ಶ್ರೀ.ಜೆ.ಸಿ.ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ತಮಗೆ ಪ್ರಿಮಿಲೇಜ್ ನೋಟಿಸ್ ಕೊಟ್ಟಿದ್ದೆವು, ಅದನ್ನು ನಾನು ವಿತ್‌ಡ್ರಾ ಮಾಡಿಕೊಳ್ಳುತ್ತಿದ್ದೇನೆ.

**ಅಧ್ಯಕ್ಷರು** : ಆಯಿತು. ಈಗ ಜಗದೀಶ್ ಶೆಟ್ಟರ್‌ರವರೇ ಮಾತನಾಡಿ.

**(ಆ) ವಿಷಯ : ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಸ್ಥಾಪನೆ ಬಗ್ಗೆ.**

**ಶ್ರೀ.ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ)** : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಹೈಕೋರ್ಟಿನ ಸರ್ಕ್ಯೂಟ್ ಬೆಂಡ್ ಸ್ಥಾಪನೆ ಮಾಡುವ ಬಗ್ಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಈ ಸರ್ಕ್ಯೂಟ್ ಬೆಂಚನ್ನು ಧಾರವಾಡ, ಗುಲ್ಬರ್ಗಾಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಹೈಕೋರ್ಟ್‌ನವರು ಒಪ್ಪಿಕೊಂಡರು. ಸರ್ಕಾರವು ಒಪ್ಪಿಕೊಂಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆದರೆ ಹಿಂದಿನ ಸದನದಲ್ಲಿ ಈ ಬಗ್ಗೆ ಚರ್ಚೆ ಆಯಿತು. ಆದರೆ ಇವತ್ತಿನವರೆವಿಗೂ ಆ ಕಮಿಟಿಯಲ್ಲಿರುವ ನ್ಯಾಯಾಧೀಶರುಗಳಾದ, ನ್ಯಾಯಮೂರ್ತಿಗಳಾದ ನಾಯಕ್‌ರವರು ಪಾಟೀಲ್‌ರವರು, ಇನ್ನೊಬ್ಬರು ಸೇರಿ, ಮೂರು ನ್ಯಾಯಧೀಶರ ಸಮಿತಿ ಇವತ್ತು ಗುಲ್ಬರ್ಗಾಕ್ಕಾಗಲಿ ಅಥವಾ ಧಾರವಾಡಕ್ಕಾಗಲಿ ಬಂದು ಆ ಕಟ್ಟಡವನ್ನು ಎಲ್ಲಿ ನಿಗದಿ ಮಾಡಬೇಕು, ಎಲ್ಲಿ ಅದನ್ನು ಪ್ರಾರಂಭ ಮಾಡಬೇಕು, ಪ್ರಿಲಿಮಿನರಿಯಾಗಿ ಇವನ್ನೆಲ್ಲಾ ಮಾಡಬೇಕಾಗಿತ್ತು ಇದುವರೆವಿಗೂ ಅದನ್ನು ಮಾಡಿಲ್ಲ. ಅದು ಅನುಷ್ಟಾನವಾಗದಿದ್ದರೆ, ಹಿಂದೆ ನ್ಯಾಯಮೂರ್ತಿಗಳಾದ ಶ್ರೀ ಚಂದ್ರಶೇಖರ್‌ರವರು 1979 ರಲ್ಲಿ ಹೈಕೋರ್ಟ್ ಪೀಠ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದರು, ಆದರೆ ಮುಂದೆ ಅದನ್ನು ಪ್ರೋಸೆಸ್ ಮಾಡದಿದ್ದುದಕ್ಕೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಮುಂದೆ ಯಾವುದೇ ಕಾರ್ಯಾಚರಣೆ ಮಾಡದಿದ್ದುದ್ದರಿಂದ, ಇವತ್ತು ಹೈಕೋರ್ಟ್ ಬೆಂಚ್ ಆಗಲಿಲ್ಲ. ಹೈಕೋರ್ಟ್ ಸೆರ್ಕ್ಯೂಟ್ ಬೆಂಚ್ ಮಾಡಲು ಎಲ್ಲಾ ನಿರ್ಧಾರವಾದರೂ ಇದುವರೆವಿಗೂ ನ್ಯಾಯಮೂರ್ತಿಗಳು ಬಂದು ವೀಕ್ಷಣೆ ಮಾಡಿ ಮುಂದಿನ ಕಾರ್ಯಯೋಜನೆಯನ್ನು ಮಾಡುತ್ತಿಲ್ಲ. ಇವತ್ತು ಧಾರವಾಡದಲ್ಲಿ ಅಲ್ಲಿನ ಬಾರ್ ಅಸೋಸಿಯೇಷನ್ ಅಧ್ಯಕ್ಷರಾದ ಬಿ.ಡಿ ಹಿರೇಮಠ್‌ರವರು ಮತ್ತು ಪ್ರಭುಲ್ಲ ನಾಯಕ್‌ರವರು ಅಮರಣಾಂತ ಉಪವಾಸವನ್ನು ಕಳೆದ 8 ದಿವಸಗಳಿಂದ ಕುಳಿತಿದ್ದಾರೆ. ಅವರು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದು ಅವರ ಆರೋಗ್ಯ ಹದಗೆಡುತ್ತಿದೆ. ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು? ಇವತ್ತು ಮುಖ್ಯ ನ್ಯಾಯಮೂರ್ತಿಗಳನ್ನು ಹೋಗಿ ಭೇಟಿ ಮಾಡಿದರೋ ಹೇಗೆ, ಕಾನೂನು ಸಚಿವರು ಭೇಟಿಯಾದರೋ ಹೇಗೆ, ಅವರು ಯಾವಾಗ ಭೇಟಿ ಮಾಡುತ್ತಾರೆ, ಇದಕ್ಕೆ ಒಂದು ಕಾಲ ಮಿತಿಯನ್ನು ಫಿಕ್ಸ್ ಮಾಡುತ್ತೀರೋ ಹೇಗೆ, ಅದು ಆದರೆ ಸರಿಯಾದ ರೀತಿಯಲ್ಲಿ ನಿಮ್ಮ ಬೊನಫೈಡ್ ತೋರಿಸುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ, ಇವತ್ತು ಹೈಕೋರ್ಟ್ ಸೆರ್ಕ್ಯೂಟ್ ಬೆಂಚ್ ಮಾಡುವ ನಿರ್ಣಯವಾಗಿದ್ದು, ಮುಂದೆ ಅದು ಅನುಷ್ಟಾನವಾಗದಿದ್ದರೆ, ಇದೆ ರೀತಿಯಾಗಿ ಒಂದು, ಎರಡು ವರ್ಷ ಹೋದರೆ ಮುಂದೆ ಮತ್ತೊಂದು ದಿವಸ ಹೈಕೋರ್ಟ್‌ನವರು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಡಿನೈ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಕಾನೂನು ಸಚಿವರು ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು ಇದಕ್ಕೆ ಕಾಲಮಿತಿಯನ್ನು ನಿಗದಿ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಅಲ್ಲಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮೋರೆಯವರು ಸದನದಲ್ಲೆ ಇದ್ದಾರೆ, ಅವರ ಕ್ಷೇತ್ರದಲ್ಲಿ ಇವತ್ತು ಅಮರಣಾಂತರ ಉಪವಾಸ